# ನಿಲ್ದಾಣ–ನಲ್ದಾಣ

ಕಾಯುವ ತಾಣ 'ನಿಲ್ದಾಣ'. ವಾಹನಗಳಿಗೆ ಕಾಯುವಾಗ ಜನರಿಗೆ ಅನುಕೂಲವಾಗಲೆಂದೇ ನಿಲ್ದಾಣಗಳನ್ನು ಕಟ್ಟುವುದು ವಾಡಿಕೆ. ಆದರೆ ಈ ವಾಡಿಕೆಯ ಹೊರತಾಗಿ, ಕಾಯುವಿಕೆಯನ್ನು ಸಹ್ಯವಾಗಿಸುವ ಸುಂದರ ಪ್ರಯತ್ನದಂತೆ ಕೆಲವು ನಿಲ್ದಾಣಗಳು ಕಾಣುತ್ತವೆ. ವಿಭಿನ್ನ ವಿನ್ಯಾಸ, ಪರಿಕಲ್ಪನೆಯಿಂದ ಮನಸೆಳೆಯುವ ಅಂಥ ಕೆಲವು ಬಸ್ ನಿಲ್ದಾಣಗಳ ಪರಿಚಯ ಇಲ್ಲಿದೆ.

■ ಸಂಗ್ರಹ: ಎಸ್ಸೆನ್





## ಹಣ್ಣುಗಳ ರೂಪದಲ್ಲಿ ನಿಲ್ದಾಣ

ಬಸ್ ನಿಲ್ದಾಣಕ್ಕೆ ಸಾದಾ ಸೀದಾ ವಿನ್ಯಾಸವೇ ಏಕಿರಬೇಕು? ಕಣ್ಸೆಳೆಯುವ ಜೊತೆಗೆ ಬಾಯಲ್ಲಿ ನೀರೂರಿಸುವ ಹಣ್ಣುಗಳ ವಿನ್ಯಾಸದಲ್ಲಿ ಏಕೆ ರೂಪಿಸಬಾರದು? ಇಂಥದ್ದೊಂದು ಆಲೋಚನೆ ಬಂದಿದ್ದು ಜಪಾನೀಯರಿಗೆ. ಜಪಾನಿನ ನಾಗಸಾಕಿಯ ಇಶಾಯಾ ನಗರದಲ್ಲಿ ಈ ರೀತಿ ಹಣ್ಣುಗಳ ರೂಪದ ನಿಲ್ದಾಣಗಳಿವೆ. ಹಣ್ಣುಗಳಿಂದ ಪ್ರೇರಿತವಾಗಿ ಈ ನಿಲ್ದಾಣಗಳ ವಿನ್ಯಾಸ ಮಾಡಲಾಗಿದೆ. ಆಪ್ರಿಕಾಟ್, ನಿಂಬೆ, ಟೊಮ್ಯಾಟೊ, ಸ್ಟ್ರಾಬೆರಿ, ಕಲ್ಲಂಗಡಿ ಹಾಗೂ ಕರಬೂಜ ಹಣ್ಣುಗಳ ವಿನ್ಯಾಸದಲ್ಲಿ ಸುಂದರವಾಗಿ ನಿಲ್ದಾಣಗಳು ರೂಪಿತಗೊಂಡಿವೆ. ಈ ನಿಲ್ದಾಣಗಳು ನಗರದ ಸೌಂದರ್ಯವನ್ನೂ ಹೆಚ್ಚಿಸಿವೆ. ಇಂಥ ಒಟ್ಟು 16 ನಿಲ್ದಾಣಗಳು ಇಲ್ಲಿದ್ದು, ಟ್ರಾವೆಲ್ ಎಕ್ಸ್‌ಪೊ ಕಾರಣವಾಗಿ 1990ರಲ್ಲಿ ಇವನ್ನು ಕಟ್ಟಲಾಗಿದೆ.

## ನಿಲ್ದಾಣ– ಓದುವ ತಾಣ

ಬಸ್‌ಗಾಗಿ ಕಾಯುತ್ತಾ ಸುಮ್ಮನೆ ಕಾಲ ದೂಡುವ ಬದಲು ಆ ಸಮಯವನ್ನು ಸದುಪಯೋಗಪಡಿಸಿಕೊಳ್ಳಬಹುದಲ್ಲ? ಈ ಪರಿಕಲ್ಪನೆಯಲ್ಲಿ ಇಸ್ರೇಲ್‌ನಲ್ಲಿನ ಈ ಬಸ್ ನಿಲ್ದಾಣ ರೂಪುಗೊಂಡಿದೆ. ಇಸ್ರೇಲ್‌ನ ನೆಸ್ ಝಿಯೋನಾ ಎಂಬಲ್ಲಿ ಬಸ್ ನಿಲ್ದಾಣದಲ್ಲಿಯೇ ಪುಸ್ತಕಗಳನ್ನು ಜೋಡಿಸಿಡಲಾಗಿದೆ. ಸ್ವಯಂ ಪ್ರೇರಣೆಯಿಂದ ಕೆಲವರು ಇಲ್ಲಿ ಪುಸ್ತಕಗಳನ್ನಿಟ್ಟು ಹೋಗುತ್ತಾರೆ. ಬಸ್ ಕಾಯುವ ಸಮಯದಲ್ಲಿ ಪ್ರಯಾಣಿಕರು ಓದುತ್ತಾ ಕುಳಿತುಕೊಳ್ಳುತ್ತಾರೆ. ಓದುತ್ತಾ ಮೈ ಮರೆತು ಬಸ್ ತಪ್ಪಿದ್ದೂ ಇದೆಯಂತೆ!



## 'ಬಾಬೀಸ್' ಬಸ್ ಕಥೆ

ಸ್ಕಾಟ್‌ಲೆಂಡ್‌ನಲ್ಲಿರುವ ಈ ಪುಟ್ಟ ನಿಲ್ದಾಣವನ್ನು 'ಬಾಬೀಸ್ ಬಸ್ ಶೆಲ್ಟರ್' ಎಂದು ಕರೆಯಲಾಗುತ್ತದೆ. ಪುಟ್ಟದಾಗಿ, ಚೊಕ್ಕವಾಗಿರುವ ಈ ನಿಲ್ದಾಣದ ಹಿಂದೆ ಸುಂದರ ಕಥೆಯೂ ಇದೆ. ಸ್ಕಾಟ್‌ಲೆಂಡ್‌ನ ಬಾಲ್ಟಾಸೌಂಡ್‌ನಲ್ಲಿರುವ ಹಳ್ಳಿಯೊಂದರಲ್ಲಿ ಈ ನಿಲ್ದಾಣವಿದೆ. ಬಾಬಿ ಮಕೌಲೆ ಎಂಬ ಪುಟ್ಟ ಹುಡುಗ ಹಳ್ಳಿಯಿಂದ ತನ್ನ ಶಾಲೆಗೆ ಹೋಗಲು ಬಸ್ ಹತ್ತಲೆಂದು, ಸೈಕಲ್‌ನಲ್ಲಿ ಈ ನಿಲ್ದಾಣಕ್ಕೆ ಬಂದು, ಇಲ್ಲಿಂದ ಬಸ್‌ನಲ್ಲಿ ಹೋಗುತ್ತಿದ್ದ. 1996ರಲ್ಲಿ ಇಲ್ಲಿನ ಸ್ಥಳೀಯ ಕೌನ್ಸಿಲ್ ಈ ನಿಲ್ದಾಣವನ್ನು ತೆರವುಗೊಳಿಸಲು ನಿರ್ಧರಿಸಿತ್ತು. ಆದರೆ ಏಳು ವರ್ಷದ ಈ ಪುಟ್ಟ ಹುಡುಗ, ಒಂದು ಪತ್ರ ಬರೆದ ಕಾರಣದಿಂದ ನಿಲ್ದಾಣವನ್ನು ಹಾಗೇ ಉಳಿಸಲಾಯಿತು. ನಿಲ್ದಾಣಕ್ಕೆ ಅವನ ಹೆಸರನ್ನೇ ಇಡಲಾಯಿತು.

ಈಗ ಈ ನಿಲ್ದಾಣದಲ್ಲಿ ಸಕಲ ಸೌಲಭ್ಯಗಳನ್ನೂ ಒದಗಿಸಲಾಗಿದೆ. ಸೋಫಾ, ಟೀವಿ ಇಡಲಾಗಿದೆ. ಹೂ ಕುಂಡಗಳನ್ನೂ ಇಟ್ಟು ಬಸ್ ನಿಲ್ದಾಣವನ್ನು ಸೊಗಸಾಗಿರಿಸಲಾಗಿದೆ. ಪ್ರತಿ ವರ್ಷವೂ ಇಲ್ಲಿನ ನಿವಾಸಿಗಳು ನಿಲ್ದಾಣದ ಪೀಠೋಪಕರಣಗಳನ್ನು ಬದಲಿಸುತ್ತಿರುವುದು ವಿಶೇಷ.

